ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
<u>ಸಿ.ಸಿ.1747/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎನ್ ದೇವೇಂದ್ರಕುಮಾರ್ | ಪಿ.ಡಬ್ಲ್ಯೂ.1 |
| ತಂದೆಯ ಹೆಸರು | : | ನೇಮ್ರಲ್ ಕೊಠಾರಿ | ಸಿ.ಡಬ್ಲ್ಯೂ.1 |
| ವಯಸ್ಸು | : | 53 ವರ್ಷ | |
| ವೃತ್ತಿ | : | ನ್ಯಾಯವಾದಿ | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 08.04.2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಆಕೆಯ ಗಂಡ ಪ್ರಕಾಶ್ ತಾಳಿಕೋಟೆ ಗೊತ್ತು. ಚಾಸಾ 4 ರಿಂದ 6 ರವರು ನನಗೆ ಗೊತ್ತು. 2 ನೇ ಆರೋಪಿ ಪ್ರಕಾಶ್ ತಾಳಿಕೋಟೆ ಇವರು 2016-17 ರಿಂದ ಪರಿಚಯ ಆಗಿದ್ದರು. ಸದರಿಯವರು ನನ್ನ ಕಚೇರಿಗೆ ಬರುತ್ತಿದ್ದರು. ಸದರಿಯವರು ಹಲವು ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದು, ಅವರು ನನ್ನಿಂದ ಕಾನೂನು ಸಲಹೆ ಪಡೆಯಲು ಆಗಾಗ ಬರುತ್ತಿದ್ದರು. ಸದರಿಯವರು ಖಾಸಗಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸಹ ಕೆಲಸ ಮಾಡುತ್ತಿದ್ದರು. ಹೀಗಿರುವಾಗ್ಗೆ ಆಗಸ್ಟ್ 2018 ರಲ್ಲಿ ಹಿರೇಮಗಳೂರು ಬಡಾವಣೆಯ 2 ನೇ ಹಂತದಲ್ಲಿ 20X30 ಅಡಿ ಅಗಲದ ಸಿ.ಡಿ.ಎ. ಆರ್ ಸಿ.ಸಿ. ಮನೆ ಸ್ವತ್ತಿನ ಇ211ರ ಆಸ್ತಿ ಮಾರಾಟಕ್ಕಿದೆ ಎಂದು ನನ್ನ ಬಳಿ ಪ್ರಸ್ತಾಪ ಮಾಡಿದ್ದರು. ಸದರಿ

ಆಸ್ತಿ ವ್ಯವಹಾರಕ್ಕೆ ಸಂಬಂಧ ಪ್ರಕಾಶ್ ತಾಳಿಕೋಟೆ ಇವರು ನನ್ನ ಬಳಿ ಮಾರುಕಟ್ಟೆ ಮೌಲ್ಯದ ಬಗ್ಗೆ ನೇರವಾಗಿ ಮಾತನಾಡಿದರು ಮತ್ತು 1 ನೇ ಆರೋಪಿ ನನ್ನ ಜೊತೆ ಈ ವ್ಯವಹಾರಕ್ಕೆ ಸಂಬಂದಿಸಿದಂತೆ ಫೋನಿನಲ್ಲಿ ಮಾತನಾಡಿದರು. ದಿಃ 12.08.2018 ರಂದು 1 ನೇ ಆರೋಪಿ ಮತ್ತು ಆಕೆಯ ಗಂಡ ನನ್ನ ಕಚೇರಿಗೆ ಬಂದರು. ಆ ದಿನ ಮಾತುಕತೆಯಾಗಿ ಅಂತಿಮವಾಗಿ 20 ಲಕ್ಷ ರೂಗಳಿಗೆ ಮಾರಾಟ ಮಾಡಲು ಆರೋಪಿತರು ಒಪ್ಪಿದರು. ಅದೇ ದಿನ 51 ಸಾವಿರ ಮುಂಗಡ ಹಣವಾಗಿ 1 ನೇ ಆರೋಪಿ ಕೈನಲ್ಲಿ ನಗದು ರೂಪದಲ್ಲಿ ಕೊಟ್ಟೆನು. ದಿಃ 13.08.2018 ರಿಂದ ದಿಃ 23.04.2019 ರವರೆಗೆ ಬೇರೆ ಬೇರೆ ದಿನಾಂಕಗಳಂದು SBI ಮತ್ತು CDCC ಬಜಾಜ್ ಶಾಖೆಯ ಚೆಕ್ ಗಳ ಮೂಲಕ ಮೇಲೆ ಹೇಳಿದ 51 ಸಾವಿರ ನಗದು ಹಣ ಸೇರಿ ಒಟ್ಟು 11 ಲಕ್ಷ ರೂಗಳನ್ನು ಪಾವತಿ ಮಾಡಿದ್ದೇನೆ. ಒಂದೆರಡು ಚೆಕ್ ಗಳ ಮೂಲಕ 1 ನೇ ಆರೋಪಿಯ ಹೆಸರಿಗೆ ಸ್ವಲ್ಪ ಹಣ ಪಾವತಿ ಮಾಡಿದ್ದೇನೆ ಮತ್ತು ಉಳಿದ ಹಣವನ್ನು 2 ನೇ ಆರೋಪಿಯ ಹೆಸರಿಗೆ 1 ನೇ ಆರೋಪಿಯ ಕೋರಿಕೆಯ ಮೇರೆಗೆ ಕೊಟ್ಟಿರುತ್ತೇನೆ. ಈ ವ್ಯವಹಾರಕ್ಕೆ ಸಂಬಂಧ ನನ್ನ ಮತ್ತು ಆರೋಪಿಯ ನಡುವೆ ದಿಃ 13.08.2018 ರಂದು ಒಂದು ಲಿಖಿತ ಕರಾರು ಆಗಿರುತ್ತದೆ. ಆನಂತರ ದಿನಗಳಲ್ಲಿ ಆರೋಪಿತರಿಗೆ ಪಾವತಿ ಆದ ಆ ಹಣದ ಸಂಬಂಧ ಅದೇ ಕರಾರಿನ ಮೇಲೆ ಷರಾ ಬರೆಯಲಾಗಿದೆ. ಇಬ್ಬರೂ ಆರೋಪಿತರು ಸದರಿ ಷರಾಕ್ಕೆ ಸಹಿ ಹಾಕುತ್ತಾ ಬಂದಿದ್ದರು. ದಿಃ 23.04.2019 ರಂದು ನೊಂದಾಯಿತ ಕರಾರುಪತ್ರ ಮಾಡಿಕೊಳ್ಳಲು ಮಾತುಕತೆಯಾಗಿ ಅದೇ ದಿನ ಒಂದು ನೊಂದಾಯಿತ ಕರಾರುಪತ್ರ ನನ್ನ ಮತ್ತು ಆರೋಪಿತರ ನಡುವೆ

ಆಗಿದೆ. ನೊಂದಾಯಿತ ಕರಾರುಪತ್ರ ಆಗಿದ್ದರಿಂದ ದಿಃ 13.08.2018 ರಂದು ಆಗಿದ್ದ ನೊಂದಾಯಿತವಲ್ಲದ ಕರಾರುಪತ್ರವನ್ನು ಹರಿದುಹಾಕಲಾಗಿತ್ತು. ದಿಃ 23.04.2019 ರಂದು ಅಸ್ತಿತ್ವಕ್ಕೆ ಬಂದ ಕರಾರಪತ್ರದಲ್ಲಿ ಆರೋಪಿತರು ಆಸ್ತಿ ಸಂಬಂಧ ಎಸ್ ಬಿ ಐ ಹುಡ್ಕೋ ಶಾಖೆಯಲ್ಲಿ 8 ಲಕ್ಷ ಸಾಲ ಇರುವುದರಿಂದ ಅದನ್ನು ತೀರುವಳಿ ಮಾಡಲು 8 ತಿಂಗಳು ಕಾಲಾವಕಾಶ ಬೇಕು ಎಂದು ಕೇಳಿದ್ದರು. ಆರೋಪಿತರು ಕೋರಿದಂತೆ 8 ತಿಂಗಳು ಕಾಲಾವಕಾಶ ಕೊಟ್ಟು ಅವರು ಕ್ರಯಪತ್ರವನ್ನು ನೊಂದಣಿ ಮಾಡಿಕೊಂಡಿಲ್ಲ. 8 ತಿಂಗಳ ನಂತರ ಆರೋಪಿತರ ಬಳಿ ಕೇಳಲಾಗಿ ಸದರಿಯವರು ಬ್ಯಾಂಕ್ ನಲ್ಲಿ ದಾವಾ ಸ್ವತ್ತಿನ ಬೆಲೆ 14 ಲಕ್ಷ ರೂ. ಸಾಲ ಇದೆ ಅದನ್ನು ತೀರುವಳಿ ಮಾಡಬೇಕಾಗಿದೆ ಎಂದು ಬೇಜವಬ್ದಾರಿಯಿಂದ ಉತ್ತರ ಕೊಟ್ಟರು. ಬೇರೆಯವರಿಂದ ಇದೇ ಆಸ್ತಿಗೆ ಸಂಬಂಧ ಬೇರೆಯವರಿಗೂ ಸಹ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದು ತಿಳಿದು ಬಂದಿತು. ನಂತರ ನಾನು ಉಪ ನೊಂದಣಾದಿಕಾರಿಗಳ ಕಚೇರಿಗೆ ಹೋಗಿ ವಿಚಾರಣೆ ಮಾಡಿದಾಗ ಇದೇ ಆಸ್ತಿಗೆ ಸಂಬಂದ ಚಂದ್ರಕಲಾ ಕೋಂ ಕೃಷ್ಣಶೆಟ್ಟಿ ಎನ್ನವವರಿಗೆ ಕ್ರಯದ ಕರಾರುಪತ್ರ ಬರೆದುಕೊಟ್ಟಿರುವುದಾಗಿ ತಿಳಿದು ಬಂದಿತು. ಅಲ್ಲದೇ ಆರೋಪಿತರ ಮೇಲೆ ಸಾಕಷ್ಟು ಚೆಕ್ ಬೌನ್ಸ್ ಪ್ರಕರಣಗಳು ದಾಖಲಾಗಿರುವುದು ತಿಳಿದು ಬಂದಿತು. ಆದುದರಿಂದ ನಾನು ಪೋಲಸರಿಗೆ ಆರೋಪಿತರ ವಿರುದ್ದ ದೂರು ನೀಡಿದೆ. ಪೋಲೀಸರು ಸದರಿ ದೂರಿನ ಸಂಬಂದ ಯಾವುದೇ ಕ್ರಮವನ್ನು ಕೈಗೊಳ್ಳದ ಕಾರಣ ಮಾನ್ಯ ನ್ಯಾಯಾಲಯದ ಮುಂದೆ ಖಾಸಗಿ ದೂರನ್ನು ದಾಖಲು ಮಾಡಿದ್ದೇನೆ. ಮಾನ್ಯ ನ್ಯಾಯಾಲಯವು ಖಾಸಗಿ ದೂರಿನ ವಿಚಾರವಾಗಿ ತನಿಖೆ ನಡೆಸಲು ನಗರ ಪೋಲೀಸ್ ಠಾಣೆಗೆ

ನಿರ್ದೇಶಿಸುವ ಮೇರೆಗೆ ಪ್ರಕರಣ ದಾಖಲು ಮಾಡಿ ತನಿಖೆ ನಡೆಸಿರುತ್ತಾರೆ. ಸಾಕ್ಷಿಗೆ ಖಾಸಗಿ ಫಿರ್ಯಾದು ವನ್ನು ತೋರಿಸಲಾಗಿದೆ ಅದರಲ್ಲಿ ಇರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಪೋಲೀಸರಿಗೆ ಪ್ರಕರಣ ತನಿಖೆಗೆ ಹೋದ ನಂತರ ಪೋಲೀಸರು ದಿಃ 06.11.2020 ರಂದು ಫೋನ್ ಕರೆ ಮಾಡಿ ಮಹಜರ್ ಗೆ ಸಹಕರಿಸುವಂತೆ ಕೇಳಿಕೊಂಡರು. ಆ ಮೇರೆಗೆ ದಿಃ 07.11.2020 ರಂದು ನನ್ನ ಕಚೇರಿಗೆ ಪೋಲೀಸ್ ನವರು ಬಂದರು. ಪೋಲೀಸ್ ನವರೇ ಸುನೀಲ್ ಮತ್ತು ಮಹಮದ್ ಆ್ಯರೀಸ್ ಎನ್ನುವವರು ಸಾಕ್ಷಿದಾರರಾಗಿ ಕರೆತಂದಿದ್ದರು. ನಾನು ಇದೇ ಜಾಗದಲ್ಲಿ ಕರಾರನ್ನು ಬರೆಯಲಾಗಿತ್ತು ಮತ್ತು ಹಣ ಪಾವತಿ ಮಾಡಲಾಗಿತ್ತು ಎಂದು ಹೇಳಿದ ಮೇರೆಗೆ ಪೋಲೀಸರು ಬೆಳಿಗ್ಗೆ 11 ರಿಂದ 12 ರವರೆಗೆ ಪಂಚ ಸಾಕ್ಷಿಗಳ ಸಮಕ್ಷಮದಲ್ಲಿ ಮಹಜರ್ ಬರೆದರು. ಮಹಜರ್ ಸಮಯದಲ್ಲಿ ಫೋಟೋ ತೆಗೆಯಲಾಗಿದೆ. ಮಹಜರ್ ಗೆ ನಾನು, ಸುನೀಲ್, ಮಹಮದ್ ಆ್ಯರಿಸ್ ಹಾಗೂ ಪೋಲೀಸರು ಸಹಿ ಮಾಡಿದ್ದೇವೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದಾರೆ. ಮಹಜರ್ ನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೊಟೋ ತೋರಿಸಲಾಗಿ ಅದನ್ನ ನೋಡಿ ಗುರುತಿಸಿದ್ದಾರೆ. ಸಾಕ್ಷಿಗೆ ತೋರಿಸಲಾದ ಪೋಟೋವನ್ನು ನಿಪಿ 3 ಎಂದು ಗುರುತಿಸಾಲಾಯಿತು. ನಿಪಿ 3 ರಲ್ಲಿ ಕಾಣುವ ಜಾಗ ನನ್ನ ಕಚೇರಿಯಾಗಿದ್ದು ಅದರಲ್ಲಿ ನಾನು ಸುನೀಲ್, ಮಹಮದ್ ಆ್ಯರಿಸ್ ಹಾಗೂ ಪೋಲೀಸ್ ನವರು ಇದ್ದೇವೆ. ದಿಃ

23.04.2019 ರ ಸ್ವಾದೀನರಹಿತ ನೊಂದಾಯಿತ ಕ್ರಯದ ಕರಾರುಪತ್ರವನ್ನು ಖಾಸಗಿ ದೂರಿನ ಜೊತೆ ಹಾಜರು ಮಾಡಿದ್ದು ಅದನ್ನು ನಿಪಿ 4 ಎಂದು ಗುರುತಿಸಿದ್ದೇನೆ. ನಿಪಿ 4 ರ ಮೇಲೆ ಇರುವ ನನ್ನ ಮತ್ತು ಆರೋಪಿತರ ಪೋಟೋಗಳು ಮತ್ತು ಸಹಿಗಳನ್ನು ಹಾಗೂ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದೇನೆ. ನಿಪಿ 4(ಎ) ನಿಂದ (ಜೆಡ್-I ರಿಂದ X) ದು ಗುರುತಿಸಲಾಯಿತು. ದಿಃ 10.07.2017 ರಂದು ಚಂದ್ರಕಲಾ ಮತ್ತು ಆರೋಪಿತರ ನಡುವೆ ಆಗಿರುವ ಸ್ವಾದೀನರಹಿತ ನೊಂದಾಯಿತ ಕ್ರಯದ ಕರಾರುಪತ್ರವನ್ನು ನೋಡಿ ಗುರುತಿಸಿದ್ದೆನೆ. ಅದನ್ನು ನಿಪಿ 5 ಎಂದು ಎಂದು ಗುರುತಿಸಲಾಯಿತು. ಋಣಭಾರ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ 6 ಎಂದು ಗುರುತಿಸಲಾಯಿತು. 1 ನೇ ಆರೋಪಿ ನ್ಯಾಯಾಲಯದ ಮುಂದೆ ಇದ್ದು ಅವರನ್ನು ನೋಡಿ ಗುರುತಿಸಿದ್ದೇನೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (2 ನೇ ಆರೋಪಿ ತಲೆಮರೆಸಿಕೊಂಡಿದ್ದಾನೆ.)

**ಆರೋಪಿ ಪರ ವಕೀಲರು ಪಾಟಿ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.1747/2021
PW- 1CW-1

The accused NO. 1 is present. The CW-1 is present and examined as PW-1 Ex.P. 1, 1(a), 2, 2(a) , 3 , 4 4(a) t Z(I to X), 5 and 6 marked . The cross of PW-1 is deferred on request . The Counsel for accused filed application Under section 262of BNSS 2023. posted for objection. Call on for cross of PW- 1 and objection by: 23.04.2025.